ಇನಾಂ ಇಲಾಖಾ.

ನಂ. 12. ತಾರೀಖು 5ನೇ ಡಿಕಂಬರ್ 1876.

ಹಾಸನ ಡಿಸ್ಟ್ರಿಕ್ಟ್ ಹಾಸನ ತಾಲ್ಲೂಕಿನಲ್ಲಿರುವ ಇನಾಂಗಳ ಊರ್ಜಿತತ್ವದ ವಿಚಾರಣೆಯು ಈಸಬಾ ಪಹರ್‌ನಲ್ಲಿ ಇಂನಾ ಸೆಟಲ್ ಮೆಂಟ್‌ಗಳ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆ॥ ಕಟ್ಟೋಯವರಿಂದ ನಡಿಸಲ್ಪಟ್ಟು 1877ನೇ ಫಿಬ್ರವರೀ 15ನೇ ಮುಕ್ತಂನಲ್ಲಿ ಪುರುವಾಗುವದು.

2. ಸದರೀ ತಾಲ್ಲೂಕಿನಲ್ಲಿ ಯಿರುವ ಇನಾಂಗಳಿಗೆ ಸಂಬಧವುಳ್ಳ ದರ್ಖೋಬಸ್ತು ಜನಗಳೂ ರೂಬರೂ ಆಗಲಿ ತಮ್ಮ ಮುಖ್ತಾರೀ ಕರ ಮೂಲಕವಾಗಲಿ ಹಾಜರಾಗಿ ತಮ್ಮ ತಮ್ಮ ಬಾಧ್ಯತೆಗಳನ್ನು ಕುರಿತು ವ್ಯವಹರಿಸುವಂತೆಯೂ ತಮ್ಮಲ್ಲಿರುವ ಸನ್ನದ್ ಗಳನ್ನೂ ಯಿತರ ದಸ್ತಾವೇಜುಗಳನ್ನೂ ಹಾಜರ್ ಮಾಡುವಂತೆಯೂ ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ. ಹಾಗೆ ಮಾಡದೆ ಹೋದರೆ ಅವರುಗಳ ಇನಾಂಗಳು ಪ್ರಥಮತಃ ಜಫ್ತೀಕೆಳಗೆ ತರಲ್ಪಟ್ಟು ತರುವಾಯ ಆಖೈರಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

R. A. COLE,
Supt. of Inam Settlements.

ಪಬ್ಲಿಕ್ ವರ್ಕ್ಸ್ ಇಲಾಖಾ.

ತಾರೀಖು 28ನೇ ನವಂಬರ್ 1876.

ಯಗ್ಜಿಕ್ಯೂಟಿವ್ ಇಂಜನೀರ್ ಆಫಿಸ್ ಸ್ಟೋರ್ ಕೀಪರ್ ಬಿ. ವೆಂಕಟರಾಯರು ನಗರ್ ರೇಂಜ್ ಅ॥ ಇಂಜನೀರ್ ಆಫಿಸ್ ಹೆಡ್ ಕ್ಲರ್ಕ್‌ರಾಗಿ ಬಡ್ತೀಯಾದ್ದರಿಂದ ಈ ಕೆಳಗೆ ಬರುವ ಬಹಲ್‌ಗಳು ಮತ್ತು ಬಡೀಗಳು ಮಾಡಲ್ಪಟ್ಟು ಯಿರುತ್ತವೆ:—

1. ಶಿವಮೊಗ್ಗ ಡಿವೀರ್ಜ ಯಗ್ಜಿಕ್ಯೂಟಿವ್ ಇಂಜನೀರ್ ಆಫಿಸ್ ಮುನಷಿ ಹೆಚ್. ಭೀಮರಾಯರು ಇದೇ ಆಫಿಸ್ ಸ್ಟೋರ್ ಕೀಪರಾಗಿ ಅಜಮಾಇಷೀ ತರೀಕ್ ಮೊಕರರೆ.

2. ನಂಬರ್ 1ನೇ ಸಬ್‌ಡಿವಿಜ್ಞ. ರೈಟರ್ ಯಂ. ಕೃಷ್ಣರಾಯರು ಯಗ್ಜಿಕ್ಯೂಟಿವ್ ಇಂಜನೀರ್ ಆಫಿಸ್‌ನಲ್ಲಿ ಮುನಷ್ಯೀ ಯಾಗಿ ಅಜಮಾಯಿಷೀ ತರೀಕ್ ಮೊಕರರ್.

3. ನಂಬರ್ 2ನೇ ಸಬ್‌ಡಿವೀರ್ಜ ಮುತ್ಸದ್ದಿ ಟಿ. ಸುಬ್ಬರಾಯರು, ನಂಬರ್ 1ನೇ ಸಬ್‌ಡಿವೀರ್ಜ ಆಫಿಸ್ ರೈಟರಾಗಿ ಅಜ ಮಾಯಿಷೀ ತರೀಕ್ ಮೊಕರರ್.

4. ಉಮೇದ್‌ವಾರ್ ಹೆಚ್. ಕೃಷ್ಣರಾಯರು ನಂ. 2ನೇ ಸಬ್‌ಡಿವೀರ್ಜ ಮುತ್ಸದ್ದೀರಾಗಿ ಅಜಮಾಯಿಷೀ ತರೀಕ್ ಮೊಕರರ್.

ಮೇಲಿಕಂಡ ಬಹಲ್‌ಗಳು ಬಿ. ವೆಂಕಟರಾಯರು ಅ॥ ಇಂಜನೀರ್ಸ್ ಆಫೀಸಿನಲ್ಲಿ ಕೆಲಸದ ಮೇಲೆ ಹಾಜರಾಗಿ ರಿಪೋರ್ಟು ಮಾಡಿದ ತಾರೀಖು ಲಗಾಯಿತು ಜಾರೀಯಲ್ಲಿ ಬರತಕ್ಕದ್ದು.

A. STODDARD,
Exe. Engr., Shimoga Division.

ಫಾರೆಸ್ಟ್ ಇಲಾಖಾ.

ತಾರೀಖು 2ನೇ ಡಿಸಂಬರ್ 1876.

1873ನೇ ಇಸವಿ ನವಂಬರ್ 8ನೇ ಮುಕ್ತಂ ಮೈಸೂರು ಗೆಜೆಟ್ 2ನೇ ಭಾಗ 293ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ 1873 ನೇ ಯಿಸವೀ ನವಂಬರ್ 3ನೇ ಮುಕ್ತಂ 2ನೇ ನಂಬರ್‌ವುಳ್ಳ ಈ ಆಫಿಸ್ ಯಿಸ್ತಿಹಾರ್‌ನಾಮೆಯನ್ನು ರದ್ದುಪಡಿಸಿ 1876ನೇ ಯಿಸವೀ ಡಿಸಂಬರ್ 15ನೇ ಮುಕ್ತಂ ಲಗಾಯತ್ತು ಮೈಸೂರುಮೆಯ ಗವರ್ಮೆಂಟ್ ಕೋಠಿಗಳಲ್ಲಿ ಯಾವ ಜಿಲ್ಲರೆ ದರಕ್ಕೆ ಸಂದಲ್ ಮಾರ ಲ್ಪಡುತ್ತೋ ಅಂತಾ ದರಗಳ ಬಾಬತು ಈ ಕೆಳಗೆ ನಮೂದಿಸುವ, ಪರಿಷ್ಕರಿಸೋಣಾಪ ಪಟ್ಟಿಯು ಸಕಲಜನಗಳಿಗೂ ತಿಳಿಯುವ ಬಗ್ಯೆ ಘಾಯಿಷ್ ಮಾಡಲ್ಪಟ್ಟಿರುತ್ತೆ.

ಅವ್ವಲ್ ತರಹಾ	ಟನ್ 1ಕ್ಕೆ	ರೂಪಾಯಿ	900	ಅವ್ವಲ್ ತರಹಾ	ಟನ್. 1ಕ್ಕೆ	ರೂಪಾಯಿ	
ದುಯ್ಯಂತರಹಾ	,,	,,	870	ಜಬ್ ಪೊಕಲ್	,,	,,	450
ಸಿಯ್ಯಂ ತರಹಾ	,,	,,	850	ಬಗರ್ ಆದದ್	,,	,,	480
ಚಾರಂ ತರಹಾ	,,	,,	760	ಬುಕ್ಕಣಿ	,,	,,	330
ಪಾಂಜಂತರಹಾ	,,	,,	640	ಜಕ್ಕೀ ಪುಡಿ	,,	,,	150
ಜಡ	,,	,,	550				

2 ದರೋಬಸ್ತು ಅಪ್ಲಿಕೇಷ್ಟಗಳೂ, ಫಾರಸ್ಟು ಡಿವಿಜ್ಟಗಳ ಯ್ಯಸಿಸ್ಟಾಜ್ಟ್ ಡಪ್ಯುಟಿಯಾ ಅ॥ ಕ್ಟಸರ್‌ವೇಟರ್‌ಗಳಿಗೆ ಬರೆದುಕೊಳ್ಳತಕ್ಕದ್ದು.

3. ಪ್ರತಿ ಕ್ಲಾಸ್‌ನಲ್ಲಿಯೂ ಬಂದು ಟ್ಟರ್ಗಿಂತ ಜಾಸ್ತೀಯಾಡ ನೊತ್ತಕ್ಕೆ ಬರುವ ಅಪ್ಲಿಕೇಷ್ಟಗಳು ಅಂಗೀಕರಿಸಲ್ಪಡ ಲಾರದು.

4. ದರೋಬಸ್ತು ಚಿಲ್ಲರೆ ಬಿಕರೀಗೂ ನಗದೇಪಾವತೀ ಮಾಡಬೇಕು ಖರೀದೀ ಮಾಡಿದ ಸಂದಲನ್ನು ಕೂಡ್ಲೆ ಸಾಗಿಸಬೇಕು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ,—ಹಳೆ ಜುಡಿಷಿಯಲ್ ರಿಕಾರ್ಡುಗಳನ್ನು ನಾಶಪಡಿಸುವ ಅಂಶದಲ್ಲಿ ಪೊಂಗಿರುವ ರೂಟ್ ಲ್ಸ್ ಅನುಸಾರವಾಗಿ 1870ನೇ ಇಸವಿ ಜನವರೀ ಗುರ್ತೀ ಲಗಾಯತು ಅದೇ ಇಸವಿ ಡಿಸಂಬರ್ 31ನೇ ತಾರೀಖು ವರಿಗೆ ಆರಿಜನಾಲ್ ಸ್ಮಾಲ್‌ಕಾಜ್ ಅಮಲ್‌ಜಾರೀ ಯಿತರ ಮಿಸಲೇನಿಯಸ್ ಮೊಕದ್ದಮೆಗಳಲ್ಲಿ ವ ನಡವಳಿತಗಳಲ್ಲಿ ಕಕ್ಷಿಗಾರರಿಂದ ದಾಖಲ್ ಮಾಡಲ್ಪಟ್ಟ ದರೋಬಸ್ತು ದಸ್ತೈವಜುಗಳು, ಸಾಧನಗಳು, ಲೆಖ್ಖಗಳು, ಯಿತರ ಕಾಗದಗಳು 1877ನೇ ಇಸವಿ ಮಾರ್ಚಿ 31ನೇ ತಾರೀಖಿನಲ್ಲಿ ನಾಶ ಮಾಡಲ್ಪಡುವವು.

ಮೇಲೆ ತಿಳಿಸಲ್ಪಟ್ಟ ಮೊಕದ್ದಮೆಗಳಲ್ಲಿ ತಮ್ಮಿಂದ ಹಾಜರ್ಮಾಡಲ್ಪಟ್ಟ ಯಾವ ದಸ್ತೈವಜುಗಳನ್ನಾಗಲಿ ವಾಪಸ್ ತೆಗದುಕೊಳ್ಳ ತಕ್ಕ ಖಾಯಿಷ್ ಉಳ್ಳ ಕಕ್ಷಿಗಾರರು ಮೇಲೆ ನಮೂದಿಸಲ್ಪಟ್ಟ ತಾರೀಖಿಗೆ ಮಾತ್ರವೇ ಕೋರ್ಟು ದಿನಗಳಲ್ಲಿ ಮಧ್ಯಾನ್ಹ 11 ಘಂಟೇ ಲಗಾಯತು 4 ಘಂಟೆ ವಳಗಾಗಿ ಕೋರ್ಟಿಗೆ ತಿಳಿ ಪಡಿಸತಕ್ಕದ್ದು.

J. LACEY, B. L.,
Judicial Assistant Commissioner.

TUMKUR DISTRICT.

ತುಮಕೂರು ಡಿಸ್ಟ್ರಿಕ್ಟು.

ಸಕಲಜನಗಳಿಗೂ ತಿಳಿಯುವಬಗ್ಗೇ. ಇದರಿಂದ ತಿಳಿಸಲ್ಪಡುವದೇನಂದರೆ,—ಫಾರಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ತಿ ವಾಯಿ ತುಮಕೂರು ಡಿಸ್ಟ್ರಿಕ್ಟು ಜಂಗ್ಲೀಗಳ ಬಾಬತು ಆರಡಿನ ಕಂಟ್ರಾಕ್ಟು 1877—78—1878—79—1879—80 1880—81 ಮತ್ತು 1881—82ನೇ ಇಸವಿಗಳಿಗೆ ಅಂದರೆ 1877ನೇ ಏಪ್ರೆಲ್ 1ನೇ ಮರುಕ್ಕಂ ಲಗಾಯಿತು 1882ನೇ ಮಾರ್ಚಿ 31ರ ವರಿಗೆ ತಾಲ್ಲೂಕು ವಾರಾಗಿ ಚೆಡದರಖಾಸ್ತುದಾರ್ರಿಗೆ ಹರಾಜು ಮೂಲಕ 1877ನೇ ಮಾರ್ಚಿ 15ನೇ ಮರುಕ್ಕಂ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ವಿಕ್ರಯಿಸಲ್ಪಡುವದು.

2. ಐದುವರುಷಗಳ ವರಿಗೆ ಆಯಾ ವರುಷದ ಚೆಡದರಖಾಸ್ತುದಾರನು ತನ್ನ ದರಖಾಸ್ತು ಮಂಜೂರಾದ ಮೇಲೆ ಕರ್ದೆಸಿ ನೋಟುಗಳು ಯಾ ನಗದು ಹಣ 6 ಖಿಸ್ತುಗಳಿಗೆ ಯಾ ಮಾಹೇವಾರೀ ಯ್ಯರ್ನ್ಟಲ್ ವೆಂಟ್ಟಿಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲಿಯಾನಾ ದರಖಾಸ್ತು ವೊಬಲಗು ಪೈಕೀ ಹನ್ನೆರಡರಲ್ಲಿ ವೊಂದು ಹಿಸ್ಸೆಗೆ ಅಥವಾ ವೊಟ್ಟು ಕಂಟ್ರಾಕ್ಟು ವೊಬಲಗು ಪೈಕೀ 60 ಲಲ್ಲಿ ವಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟು ಕೂಡ್ಲೆ ಪುನಶ್ಚ ಹರಾಜು ಹಾಕಲ್ಪಟ್ಟು ಆ ಮೂಲಕ ಸರಕಾರಕ್ಕೆ ಬರುವ ಲುಕ್ಸಾನಿಗೆ ಅವನನ್ನು ಗುರೀ ಮಾಡಲಾದೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮರುಕ್ಕಂನಲ್ಲಿ ಪ್ರವೇಶಿಸಿ ತನ್ನ ಮೊದಲನೆ ಮಾಹೇವಾರೀ ಖಿಸ್ತುಗಳು 1877ನೇ ಮೇ 15ನೇ ಮರುಕ್ಕಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಖಿಸ್ತುಗಳು ಪ್ರತಿ ತಿಂಗಳು 15ನೇ ಮರುಕ್ಕಂನಲ್ಲಾಗಲಿ, ತತ್ಪೂರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟ ವೊಬಲಗಿಗೆ ನಿಸ್ಬತ್ ಯಿಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ವೊಬಲಗು ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.